ಇಷ್ಟೊಂದು ಕ್ಷಿಪ್ರವಾಗಿ ಬೇರೆಬೇರೆ ಊರುಗಳಿಗೆ ಭೇಟಿ ಯಾಕಾಗಿ ಕೊಡುತ್ತಿರಬಹುದು? ಬರಿ ಬಂಧುಗಳನ್ನು ಭೆಟ್ಟಿಯಾಗುವುದೆ ಅಥವಾ... ಅಂತ ಜಿಜ್ಞಾಸೆ ಹುಟ್ಟಿತು. 'ಬೆಂಗಳೂರಲ್ಲಿ ನನ್ನ ಮಗನ ಮನೆಗೆ ಹೋದರಾಯ್ತು. ಅವನಿಗೇನು ತೊಂದರೆಯಾಗೋದಿಲ್ಲ' ಮುತ್ಸದ್ದಿತನದ ಮಾತಾಗಿ ಹೊರಬಂತು. ಕಾಮತರು ಹೆಗಡೆಯವರ ಔದಾರ್ಯಕ್ಕೆ ಮೆತ್ತಗಾಗಿ ಕ್ಷಮೆಬೇಡುವ ರೀತಿಯಲ್ಲಿ ನುಡಿದರು : 'ಛೆ! ಬೇಡ... ಯಶವಂತಪುರಕ್ಕೆ ಜನ ಬರತಾರೆ. ಹೋಟೆಲು ರೂಮು ಆಗಲೆ ವ್ಯವಸ್ಥೆಯಾಗಿದೆ' ಅಕ್ಕಪಕ್ಕ ನೋಡಿ ಹೆಗಡೆಯವರಿಗೆ ಮಾತ್ರ ಕೇಳುವಂತೆ ಮುಂದೆಬಗ್ಗಿ, 'ನಿಮ್ಮ ಹತ್ರ ಎಂತಾ ಸಂಕೋಚ? ನಾನು ವ್ಯವಹಾರಕ್ಕಾಗಿ ಬಂದದ್ದು. ಸೈಟು, ಮನೆ ಇಂತದ್ದು ಅಂತ ನಿಶ್ಚಯವಾಗಿಲ್ಲ. ಆದ್ರೆ ಸ್ಥಿರಾಸ್ತಿಯಲ್ಲಿ ತೊಡಗಿಸ್ಬೇಕು. ಅದು ನನ್ನಾಸೆ' ಅಂದರು. ಈಗಷ್ಟೆ ಹುಟ್ಟಿದ ಒಳಗಿನ ಅಮೂರ್ತ ಒತ್ತಡಕ್ಕೆ, 'ದೊಡ್ಡದನ್ನೆ ಹುಡುಕ್ತಿರಬೇಕು?...' ಕೇಳಿದರು. 'ಹೂಂ... ಹಾಗೇ ಅಂದ್ಕೊಳ್ಳಿ. ಬೆಂಗಳೂರಾದ್ರೆ ಚಿಕ್ಕದು, ಹೊರಗಾದ್ರೆ ಸುಮಾರು ದೊಡ್ಡದೆ ಆಗಬಹುದೇನೋ...' ನಕ್ಕರು. 'ಕಾಮತರೆ, ನೀವ್ಯಾಕೆ ನಮ್ಕಡೆ ತೋಟಕ್ಕೆ ಹಾಕ್ಬಾರದು? ಈಗ ಅಡಕೆಗೆ ಬಂಗಾರದ ಬೆಲೆ. ನಮ್ಮ ತೋಟದ ಸೀಮೇಲಂತು ಒಳ್ಳೇ ಇಳುವರಿ' ಅಂದರು. ಸ್ವಲ್ಪ ಯೋಚಿಸಿದ ಕಾಮತರು, 'ನಮ್ಮಜ್ಜನ ಕಾಲದಲ್ಲಿ ಇಡಗುಂಜಿ ಹತ್ರ ನಮ್ಮದೂ ಸ್ವಲ್ಪ ತೋಟ ಇತ್ತಂತೆ. ತೋಟವನ್ನೂ ನೋಡಬಹುದೇನೊ, ಒಳ್ಳೇ ಜಾಗ ಸಿಕ್ಕಿದರೆ...' ಅಂದರು ಧೋರಣೆಯಲ್ಲಿ. 'ಅದನ್ನೇ ನಾನೂ ಹೇಳೋದು...' ಅಂದರು ಹೆಗಡೆಯವರು ಧೈರ್ಯ ಕೊಡುವವರಂತೆ.

ಈ ಗಾಡಿ ಮೆಜೆಸ್ಟಿಕ್ ತಲುಪುವಾಗ ಹತ್ತು ಗಂಟೆಯಾದರೂ ಆಯಿತು. 'ನಿಲ್ದಾಣದ ಮುಂಭಾಗ ರಸ್ತೆ ದಾಟಿದ್ರೆ ಮೆಟ್ರೊ ಇದೆ. ಜೇಪಿ ನಗರದಲ್ಲಿಳಿದುಬಿಡಿ. ಅಲ್ಲಿಂದ ಹತ್ತಿರ' ಅಂದ ಸುಮಂತ ತಾನು ನಿಲ್ದಾಣಕ್ಕೆ ಬರುವುದಿಲ್ಲ ಅಂತ ಪ್ರಕಟಪಡಿಸಿದ್ದ. ಅದೂ ಸರಿಯೆ. ಆತ ಆಫೀಸಿಂದ ಮನೆ ಸೇರೋದೆ ಒಂದು ಪ್ರಯಾಸ. ಈ ವಾಹನಗಳ ಚಂಡಮಾರುತದಲ್ಲಿ ಬೆಂಗಳೂರಿನ ಅಷ್ಟಿಷ್ಟು ಪರಿಚಯವಿರುವ ತಾನು ಅವನು ಕಾರು ತರಲಿ ಅಂತ ಬಯಸಬಾರದು. ಮೇಲಿಂದ ಅವನು ಯಾವ ಮನಃಸ್ಥಿತಿಯಲ್ಲಿದಾನೋ. ಅದು ಅವನೇ ಮಾಡಿಕೊಂಡ ಕರ್ಮ ಅಂದುಕೊಳ್ಳೋಣ ಅಂದರೂ ನಡೆಯುತ್ತಿಲ್ಲ. ತೆರೆಗಳೇಳೋದು ಕಡಲಲ್ಲೆ ಆದರೂ ಅದು ಅಪ್ಪಳಿಸೋದು ದಡಕ್ಕೇ. ತಾವು ತಣ್ಣಗಿರುತ್ತೇವೆ ಎಂಬ ನಿರ್ಲಿಪ್ತತೆ ಅಲೆ ತಲೆಗೆ ಬಡಿಯುವವರೆಗೇ!

'ಈ ಕಡೆದೇ ಮಾಡ್ಕೊಳೋ. ಮಗೆಕಾಯಿ ದೋಸೆ, ಊಟಕ್ಕೆ ಹುಳಿ, ಬೇಳೆಗೊಜ್ಜು ಮಾಡಿ ಹಾಕತಾಳೋ...' ಉಪದೇಶಿಸಿದ್ದಕ್ಕೆ ಇದೇ ಮಗ ಪಕಪಕ ನಕ್ಕಿದ್ದ. 'ನಿಮ್ಮಿಷ್ಟದ್ದು ಮಾಡಿಹಾಕೋ ಹುಡುಗಿ, ಸರಿ. ನಂಗೇನು ಲಾಭ? ಅಷ್ಟಕ್ಕು ನೀವೇನು ಬೆಂಗಳೂರಲ್ಲಿರೋರಲ್ಲ. ಮತ್ತೆ? ಇಲ್ಲಿ ಏನು ಬೇಯಿಸಿದ್ರೂ ನಿಮಗೆ ಅಷ್ಟೇ!...' ಅನೇಕ ಸಂಗತಿಗಳಿಗೆ ಆಗಲೆ ನಿರ್ಣಯ ಬರೆಯುವಂತಿತ್ತು ಅವನ ಒಂದು ಮಾತು. ತಾವೇ ನೋಡಿದ್ದರು. ರಜೆಯಿದ್ದರೆ ಬೆಳಗಾಗಿ ಹತ್ತು ಹನ್ನೊಂದು ಗಂಟೆಯ ವರೆಗೆ ರಾತ್ರಿಯೇ ಮುಂದುವರಿದರೆ, ರಾತ್ರಿಯ ಊಟ ಒಮ್ಮೊಮ್ಮೆ ಹನ್ನೆರಡಕ್ಕೂ ಆಗುತ್ತಿತ್ತು. ಆ ಊಟಕ್ಕು ಊಟ ಅಂತ ಚೀಟಿ ಅಂಟಿಸಬೇಕು! ಭುರ್ರ್ ಅಂತ ಮೋಟರು ಸೈಕಲಲ್ಲಿ ಹಾರಿ ಬಂದು ಆರ್ಡರು ಮಾಡಿದ ಐದೇ ನಿಮಿಷದಲ್ಲಿ ತಂದು ಮಹತ್ಸಾಧನೆ ಮಾಡಿದ ಧನ್ಯತೆಯಲ್ಲಿ ರಟ್ಟಿನ ಪೆಟ್ಟಿಗೆ ಕೊಡುವ ಹುಡುಗ. ಅದರೊಳಗೆ ದುಂಡನೆಯ ದುಪ್ಪಡಿಯಂತ ಪಿಜ್ಜಾ ಹೆಸರಿನ ವಸ್ತು. ಅದರ ಮೇಲೆ ತರಕಾರಿ ಮಾರ್ಕೆಟಿನ ಕಸ ಗುಡಿಸಿ ಹಾಕಿದ ಅಲಂಕಾರ. ಅರೆನಿದ್ರೆಯಲ್ಲಿ ಅದನ್ನ ಕಚ್ಚಿ, ಜಗ್ಗಿ ಹರಿದು ಭಕ್ಷಿಸುವ ಇವರು! ಒಬ್ಬರೆ ಬಂದಾಗ ಹೋಟಲಲ್ಲಿ ಊಟತಿಂಡಿ ಮಾಡದೆ ಮಗನಿಗಾಗಿ ಕಾದರೆ ಸಾಧ್ಯವೆ ಇರಲಿಲ್ಲ. ತಾನು ಲವಂಗಿಕಾಳನ್ನಲ್ಲದೆ ಇನ್ನಾರನ್ನು ಕನಸಿನಲ್ಲೂ